



**ಶತ್ರು**

ಗುರು: ಶತ್ರುಗಳನ್ನು ಮಿತ್ರರಂತೆ ಪ್ರೀತಿಸಬೇಕಾದುದು ನಿನ್ನ ಧರ್ಮ.

ಶಿಷ್ಯ: ಆಯ್ತು ಸಾರ್. ಇನ್ನು ಮುಂದೆ ಹಾಗೆಯೇ ಮಾಡುವೆ.

ಗುರು: ಅಂದಹಾಗೆ ನಿನ್ನ ಶತ್ರು ಯಾರು?

ಶಿಷ್ಯ: ಸಿಗರೇಟು, ಮದ್ಯ, ಜೂಜು...

**ರಜೆ**

ಮನೆಯಾಕೆ: ದಿನಾ ಭಿಕ್ಷೆ ಬೇಡಲು ಬರುತ್ತಿದ್ದ ನೀನು ನಿನ್ನೆ ಏಕೆ ಬರಲಿಲ್ಲ?

ಭಿಕ್ಷುಕ: ನಿನ್ನೆ ನನ್ನ ವಾರದ ರಜೆ.

**ಸೀಟು**

ಕನ್ನಡ ಸಂಘದ ಕಾರ್ಯಕ್ರಮ ಆರಂಭವಾಗಬೇಕು ಅಷ್ಟರಲ್ಲೇ, ಐವರು ಪ್ರತಿಷ್ಠಿತ ಮಹಿಳೆಯರು ಸಭಾಗೃಹವನ್ನು ಪ್ರವೇಶಿಸಿದರು. ಅವರನ್ನು ಎದುರಿನ ಸಾಲಿನಲ್ಲಿ ಕುಳ್ಳಿರಿಸದೆ ವಿಧಿ ಇರಲಿಲ್ಲ. ಆದರೆ ಎದುರಿನ 10 ಸೀಟುಗಳ ಪೈಕಿ ಎಲ್ಲಾ ಸೀಟುಗಳಲ್ಲೂ ಹತ್ತು ಜನ ಮಹಿಳೆಯರು ಆಗಲೇ ಆಸೀನರಾಗಿದ್ದರು. ಕಾರ್ಯಕ್ರಮದ ಆಯೋಜಕನಾದ ಶಿಂಗನಿಗೆ ತುಸು ಚಿಂತೆಯಾಯ್ತು. ಆದರೆ ಅದೇ ಸಮಯದಲ್ಲಿ ಅವನ ಸಮಯ ಪ್ರಜ್ಞೆಯೂ ಜಾಗೃತವಾಯ್ತು. ಕೂಡಲೇ ಮೈಕ್‌ನ ಎದುರು ನಿಂತು 'ಎದುರಿನ ಸಾಲಿನಲ್ಲಿ ಕುಳಿತಿರುವ ಮಹಿಳೆಯರ ಪೈಕಿ ಇಪ್ಪತ್ತು ವರ್ಷಗಳಿಗಿಂತ ಕೆಳಗಿನ ವಯಸ್ಸಿನ ಮಹಿಳೆಯರು ದಯವಿಟ್ಟು ಹಿಂದಿನ ಸೀಟಿನಲ್ಲಿ ಆಸೀನರಾಗಬೇಕೆಂದು ವಿನಂತಿ' ಎಂದು ಅನೌನ್ಸ್ ಮಾಡಿಯೇಬಿಟ್ಟ. ಕ್ಷಣಾರ್ಧದಲ್ಲೇ ಎದುರಿನ ಹತ್ತಕ್ಕೆ ಹತ್ತೂ ಸೀಟುಗಳು ಖಾಲಿ!

(ಸಂ) ಸೋಮನಾಥ ಎಸ್. ಕರ್ಕೇರ

ಗುಂಡ: ಮೇಷ್ಟ್ರೇ ಮೂರ್ಖರ ಜತೆ ನಾವು ಹೇಗಿರಬೇಕು?

ಮೇಷ್ಟ್ರು: ಒಳ್ಳೆ ಪ್ರಶ್ನೆ ಕೇಳಿದ್ದೀಯಾ! ಮೂರ್ಖರ ಜತೆ ವಾದ ಮಾಡದೆ ಅವರೇನು ಹೇಳ್ತಾರೆ ಅದಕ್ಕೆಲ್ಲಾ ಹೂಂ ಅನ್ನು ಸಾಕು.

ಗುಂಡ: ಹೂಂ ಸರ್ ಹೂಂ!

★★★

ಕಂಠಪೂರ್ತಿ ಕುಡಿದು ಬಂದು ಬಾಗಿಲು ತಟ್ಟಿದ ರಂಗ. ಬಾಗಿಲು ತೆರೆಯುತ್ತಿದ್ದಂತೆಯೇ 'ಛೇ! ಆ ಪಕ್ಕದ ಮನೆ ಹೆಂಗಸು ಹೇಗೆ ನಾಚಿಕೆ ಬಿಟ್ಟು ನನ್ನನ್ನು ಕರೀತಾಳೆ ನೋಡು' ಎಂದ.

ಬಾಗಿಲು ತೆಗೆದವಳು ಹೇಳಿದಳು: 'ಅಲ್ಲಿ ಕರೀತಾ ಇರೋದು ನಿಮ್ಮ ಹೆಂಡತಿ. ನೀವೀಗ ಬಂದಿರೋದು ಪಕ್ಕದ ಮನೆಗೆ!'

★★★

ಕೋಲ್ಯ: ಮನೇಲಿ ನನ್ನ ಮಾತೇ ನಡೆಯೋದು ಗೊತ್ತಾ?

ಗೆಳೆಯ: ಹೌದಾ?

ಕೋಲ್ಯ: ಹೂಂ ನಾನು ಬಿಸಿ ನೀರು ತಗೊಂಡ್ ಬಾರೇ ಅಂತ ಕೂಗಿದರೆ ಅವ್ಳು ತಿರುಗಿ ಮಾತಾಡದೆ ತಂದು ಕೊಡ್ತಾಳೆ.

ಗೆಳೆಯ: ನಿನ್ನ ಹೆಂಡ್ತಿ ತುಂಬಾ ಒಳ್ಳೆಯವಳು ಕಣೋ.

ಕೊಲ್ಯ: ಹೌದು! ಬಿಸಿನೀರಲ್ಲೇ ಪಾತ್ರೆ ಚೆನ್ನಾಗಿ ತೊಳೆಯೋಕಾಗೋದು. ಪಾತ್ರೆ ಕ್ಲೀನಾಗಿ ತೊಳೀದೇ ಹೋದ್ರೆ ಪಾತ್ರೇಲೇ ಕುಕ್ತಾಳೆ ಮಾರಾಯ.

★★★

ಹೆಂಡತಿ: ಏನ್ರಿ ಮನೆಗೆ ಇಷ್ಟು ಬೇಗ ಬಂದ್ರೀ.

ಗಂಡ: ನಮ್ಮ ಬಾಸ್ ನರಕಕ್ಕೆ ಹೋಗು ಅಂತ ಬೈದ್ರು. ಅದ್ಕೆ ಬಂದು ಬಿಟ್ಟೆ.

(ಸಂ) ಜಗದೀಶ ಎಂ. ಸಂಗಣ್ಣವರ, ಬೆಳಗಾವಿ




Invisible Hearing Aids.

Designed just for you.



**FREE** HEARING TEST & CONSULTATION WEEK

- World's MOST POWERFUL Custom Hearing Aids
- World's Only INVISIBLE-IN THE CANAL Hearing Aid
- Special CONCESSION on all Hearing Aids
- Special EXCHANGE OFFERS on all Hearing Aids



©

Be free from Hearing Problems.

SOUNDFUL 15 YEARS

SINCE 1994

RAJAN SPEECH & HEARING

Listen to life

"Schedule an Appointment Now"

**Call Toll-Free: 1800 103 0340**

( Please call between 9.30 am & 6.30 pm )

Ph: 41510404, 65467791

email: info@rshc.in, www.rshc.in

Clinic open on Sundays also-by appointment only.

IT'S NEW AND 100% INVISIBLE

Finally there's a hearing aid that is literally out of sight and off your mind !

artude

*Clinics in Bangalore:* Residency Road | Koramangala | Indiranagar | Malleshwaram